ದಿಃ 21-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ವಾದಿ ಪರ ವಕೀಲರಿಂದಃ-**

20-30 ವರ್ಷಗಳಿಂದ ಜಾಗೆಯು ಖಾಲಿ ಇತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಈ ಮೊದಲು ಜಾಗೆಯು ಮುನ್ಸಿಪಾಲ್ಟಿಗೆ ಸೇರಿದ್ದು ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿದಾರರು ಈ ಜಾಗೆಯನ್ನು ನಾವು ಮುನ್ಸಿಪಾಲ್ಟಿಯಿಂದ ಖರೀದಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಜಾಗ ಖರೀದಿ ಮಾಡುವ ಕುರಿತು ಮುನ್ಸಿಪಾಲ್ಟಿ ವತಿಯಿಂದ ಯಾವುದಾದರೂ ದಾಖಲೆ ಹಾಜರುಪಡಿಸಿರುವಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿದಾರರು ಅದನ್ನು ನಾನು ಬಾಡಿಗೆಗೆ ತೆಗೆದುಕೊಂಡಿದ್ದು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಬಾಡಿಗೆ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಇರುತ್ತದೆ.

ವಾದಿ ಹೆಸರಿನಲ್ಲಿ ಈ ಮೊದಲು ಈ ಜಾಗೆಯು ಅಲಾಟಮೆಂಟ ಆಗಿತ್ತು ಎಂದರೆ ಸಾಕ್ಷಿದಾರರು ಪುನ: ಆ ಜಾಗೆಯು ನನಗೆ ಸೇರಿರುತ್ತದೆ ಎಂದು ಉತ್ತರಿಸುತ್ತಾರೆ. 05/09/1984 ರಲ್ಲಿ ಪ್ರತಿವಾದಿಗೆ ಈ ಜಾಗೆಯು ಮಂಜೂರು ಆಗಿರುತ್ತದೆ ಎಂದರೆ ಸಾಕ್ಷಿದಾರರು ಸುಮ್ಮನಿರುತ್ತಾರೆ. 18/06/2005 ರಿಂದ ಆ ಜಾಗೆಯನ್ನು ನಿಮಗೆ ಬಾಡಿಗೆಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಮತ್ತು ವಾದಿಯ ನಡುವೆ ಒಂದು ಕರಾರು ಆಗಿ ಸದರಿ ಜಾಗೆಯನ್ನು ಗೇಣಿಯ ಮೇಲೆ ನೀಡಲಾಗಿತ್ತು ಎಂದರೆ ಸರಿಯಲ್ಲ. ಈ ಕರಾರಿನ ಪ್ರಕಾರ ಆ ಕಬ್ಜೆಯನ್ನು ನಾನು ಬಿಟ್ಟುಕೊಡುವುದಾಗಿ ನಮೂದಾಗಿತ್ತು ಎಂದರೆ ಸರಿಯಲ್ಲ. ಇಲ್ಲಿಯವರೆಗೂ ನಾನು ಬಾಡಿಗೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ಸ್ಥಳದ ಜಾಗೆಯನ್ನು ಬಿಟ್ಟು ಕೊಡುತ್ತಿಲ್ಲ ಎಂದರೆ ಸರಿಯಲ್ಲ.

ವಾದಿಯಿಂದ ನಾನು ಬಾಡಿಗೆಯನ್ನು ಪಡೆದುಕೊಂಡಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ಜಾಗೆಯಲ್ಲಿ ಬೇ ಕಾಯ್ದೆಶಿರ ಕಬ್ಜೆಯನ್ನು ಹೊಂದಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಸದರಿ ಜಾಗೆಯಲ್ಲಿ ಇರಲು ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಕೈಫಿಯತ್ತಿನಲ್ಲಿ ನಾನು ಬಾಡಿಗೆ ಪಡೆದುಕೊಂಡಿರುವ ಕುರಿತು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನನಗೆ ಮುನ್ಸಿಪಾಲ್ಟಿ ವತಿಯಿಂದ ಯಾವುದೇ ಗೇಣಿ ಪತ್ರ ಮತ್ತು ಇತರೆ ದಾಖಲಾತಿಗಳನ್ನು ಖರೀದಿ ನೀಡಿರುವ ಕುರಿತಾಗಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿದಾರನು ಒಪ್ಪಿಕೊಂಡಿರುತ್ತಾನೆ.

Sd/-
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ದಂಡಾಧೀಕಾರಿಗಳು, ಶಹಾಬಾದ